ದಿನಾಂಕಃ 14-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಎ ಎನ್ ಎಲ್ ವಕೀಲರಿಂದ**

1. ಪ್ರಸ್ತುತ ದಾವೆಯ 1 ರಿಂದ 3 ನೇ ವಾದಿಗಳು ಮತ್ತು 3 ರಿಂದ 7 ನೇ ಪ್ರತಿವಾದಿಗಳು ನನ್ನ ಮಕ್ಕಳು ಎಂದರೆ ಸರಿ. ನನ್ನ ಮಕ್ಕಳಿಗೆ ನಾನು ಆಸ್ತಿಯನ್ನು ಕೊಟ್ಟಿದ್ದು ಅದರಲ್ಲಿ ಮನೆ ಮತ್ತು ಖಾಲಿ ನಿವೇಶನಗಳು ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ನಾನು ಕೊಟ್ಟ ಆಸ್ತಿಗಳನ್ನು ನನ್ನ ಮಕ್ಕಳು ನನ್ನ ಸಹಿಯನ್ನು ಪಡೆದು ಬೇರೆಯವರಿಗೆ ಈಗಾಗಲೇ ಮಾರಾಟ ಮಾಡಿರುತ್ತಾರೆ ಎಂದು ಸ್ವಯಂ ಪ್ರೇರಿತವಾಗಿ ನುಡಿಯುತ್ತಾರೆ. ನಾನು ನನ್ನ ಗಂಡು ಮಕ್ಕಳಿಗೆ ವಾಸದ ಮನೆಯನ್ನು ಕಟ್ಟಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಅವರೂ ಸಹ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ವಾದಿಗಳಿಗೆ ಮತ್ತು 3 ರಿಂದ 7 ನೇ ಪ್ರತಿವಾದಿಗಳಿಗೆ ಆಸ್ತಿಗಳನ್ನು ಕೊಡುವ ಕಾಲಕ್ಕೆ ಸದರಿ ಆಸ್ತಿಗಳು ನನ್ನ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಆಸ್ತಿ ಪುರಸಭೆ ವ್ಯಾಪ್ತಿಗೆ ಒಳಪಡದ ಕಾರಣ ಸದರಿ ಆಸ್ತಿಯ ಕಂದಾಯ ದಾಖಲಾತಿಗಳು ಸರ್ವೆ ನಂಬರಿನಲ್ಲಿ ಇವೆ ಎಂದರೆ ಸರಿ. ಸದರಿ ದಾಖಲೆಗಳು ಸರ್ವೆ ನಂಬರಿನಲ್ಲಿರುವ ಕಾರಣ ವಾದಿಗಳು ತಮ್ಮ ಹೆಸರಿಗೆ ಬದಲಾಯಿಸಿಕೊಂಡಿಲ್ಲ ಎಂದರೆ ಸಾಕ್ಷಿ ನಮ್ಮ ಹೆಸರಿನಲ್ಲಿ ಇಲ್ಲ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

2. 6 ನೇ ಪ್ರತಿವಾದಿಯ ಹೆಸರಿಗೆ ಈ ದಾವೆಯ 1 ಮತ್ತು 2 ನೇ ದಾವಾಸ್ತಿಗಳನ್ನು ನಾನು ದಾನಪತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 5 ನೇ ದಾವಾಸ್ತಿಗಳನ್ನು ನನ್ನ ಮಗಳಾದ 6ನೇ ಪ್ರತಿವಾದಿಗೆ ದಾನಪತ್ರ ಮತ್ತು ವಿಲ್ ಮುಖಾಂತರ 2 ಆಸ್ತಿಗಳನ್ನು ವರ್ಗಾವಣೆ ಮಾಡಿದ್ದು ಇತರೆ ಆಸ್ತಿಗಳನ್ನು ಬೇರೆಯವರಿಗೆ ನೊಂದಾಯಿತ ಕ್ರಯಪತ್ರ ಮೂಲಕ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನನ್ನ ಮಕ್ಕಳೊಂದಿಗೆ ವಾಸವಾಗಿದ್ದಾಗಲೇ ಸದರಿಯವರು ನನ್ನ ಆಸ್ತಿಗಳನ್ನು ಬೇರೆಯವರಿಗೆ ನನ್ನ ಸಹಿಯನ್ನು ಪಡೆದು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ತಿಗಳು ನನ್ನ ಹೆಸರಿಗೆ ಇದ್ದರೆ ನನ್ನ ಮಕ್ಕಳಿಗೆ ಹಕ್ಕು ಬದಲಾವಣೆ ಮಾಡಿಕೊಡಬೇಕಾಗುತ್ತದೆ ಎಂದು ತಿಳಿದು ಸದರಿ ಆಸ್ತಿಗಳನ್ನು 6 ನೇ ಪ್ರತಿವಾದಿ ಮತ್ತು ಬೇರೆಯವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ಮಕ್ಕಳಿಗೆ ಆಸ್ತಿ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನನ್ನ ಆಸ್ತಿಗಳನ್ನು ಬೇರೆಯವರಿಗೆ ವರ್ಗಾವಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ವಾದಿಗಳು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವಾಸ್ತಿಗಳನ್ನು ನಮ್ಮ ಹೆಸರಿಗೆ ಹಕ್ಕು ದಾಖಲೆ ಮಾಡಿಕೊಡಬೇಕು ಎಂದು ನನ್ನ ಮಕ್ಕಳು ಎಲ್ಲರು ಸೇರಿ ನನ್ನ ವಿರುದ್ದ ಪಾಲು ವಿಭಾಗ ಕೋರಿ ಈ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಎಲ್ಲಾ ಆಸ್ತಿಗಳನ್ನು ನನ್ನ ಮಕ್ಕಳೇ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗಳು ದಾವಾಸ್ತಿಗಳಲ್ಲಿ ವಾಸವಿರುವ ಕಾರಣ ಅವರ ಹೆಸರಿಗೆ ಹಕ್ಕುದಾಖಲೆ ಮಾಡಿಕೊಡಲಿ ಎಂಬ ಉದ್ದೇಶದಿಂದ ನನ್ನವಿರುದ್ದ ಈ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಎಲ್ಲಾ ಆಸ್ತಿಗಳನ್ನವಾದಿಗಳು ಮತ್ತು ಪ್ರತಿವಾದಿಗಳು ಸೇರಿ ಮಾರಾಟ ಮಾಡಿದ್ದು ಅದರಿಂದ ಬಂದ ಪ್ರತಿಫಲವನ್ನು ಸಹ ಖರ್ಚು ಮಾಡಿರುತ್ತಾರೆ. ನನ್ನ ಹೆಸರಿನಲ್ಲಿ ಪ್ರಸ್ತುತ ಯಾವುದೇ ದಾಖಲೆ ಇಲ್ಲ ಎಂದು ನುಡಿಯುತಾರೆ. ಸಾಕ್ಷಿ ಮುಂದುವರೆದು ನನಗೆ ಈಗ ವಯಸ್ಸಗಿದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ್ಡಿದರು ಸಹ ನನ್ನ ಮಕ್ಕಳು ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳದೆ ನನ್ನ ಮೇಲೆ ಹಲ್ಲೆ ಮಾಡುತ್ತಿರುತ್ತಾರೆ ಎಂದು ನುಡಿಯುತ್ತಾರೆ, ದಾವಾಸ್ತಿಗಳ ಖಾತಾ ದಾಖಲೆಗಳು ವಾದಿ ಮತ್ತು ಪ್ರತಿವಾದಿಗಳ ಹೆಸರಿನಲ್ಲಿ ಇಲ್ಲದ ಕಾರಣ ಸದರಿಯವರು ದಾವಸ್ತಿಗಳನ್ನು ಮಾರಾಟ ಮಾಡಲು ಯಾವುದೇ ಹಕ್ಕು ಮತ್ತು ಬಾದ್ಯತೆ ಇಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ಮೇಲೆ ಒತ್ತಡ ಹೇರಿ ಬಲವಂತದಿಂದ ಬೆದರಿಸಿ ಸದರಿ ದಾವಾಸ್ತಿಗಳನ್ನು ನನ್ನ ಮಕ್ಕಳೇ ಮಾರಾಟ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ.

4. ದಾವಾಸ್ತಿಯ ಎಲ್ಲಾ ದಾಖಲೆಗಳು 6 ನೇಪ್ರತಿವಾದಿಯ ಹೆಸರಿನಲ್ಲಿರುವ ಕಾರಣ ನಾನು ಜೀವಂತವಿರುವಾಗಲೇ ಸದರಿ ದಾವಾಸ್ತಿಗಳಲ್ಲಿನ ನಮ್ಮ ಹಕ್ಕುಗಳನ್ನು ನಿಗದಿಪಡಿಸುವಂತೆ ವಾದಿಗಳು ಮತ್ತು ಪ್ರತಿವಾದಿಗಳು ನನ್ನನ್ನು ಹಲವಾರು ಬಾರಿ ಕೇಳಿದರುಎಂದರೆ ಸರಿಯಲ್ಲ. ಹಾಗಾಗಿ ವಾದಿಗಳು ಈ ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಗಳಲ್ಲಿ ವಾದಿಗಳಿಗೆ ಇರುವ ಹಿಸ್ಸಾ ಹಕ್ಕನ್ನು ಕೊಡುವುದನ್ನು ತಪ್ಪಿಸಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.